1. ಚನ್ನಕೇಶ್ವರ ರಸ್ತೆಯಿಂದ ತೆಂಗುಂಟೆ ರಸ್ತೆಯವರೆಗೆ ಚರಂಡಿ ಹಾಗೂ ರಸ್ತೆಗಳ ನಿರ್ಮಾಣ.

2. ಆಯುಬ್‌ಖಾನ್ ಮನೆಯ ಬಳಿ ಚರಂಡಿ ನಿರ್ಮಾಣ

3. ಶಮೀದಸಾಬ್ ದೇವರಕಟ್ಟೆಯಿಂದ ಹನುಮಸಾಗರದವರೆಗೆ ಚರಂಡಿ ನಿರ್ಮಾಣ

4. ಆಶ್ರಯ ಬಡಾವಣೆಯಲ್ಲಿ ಬೀದಿ ದೀಪಗಳನ್ನು ಅಳವಡಿಸುವುದು

ಈ) ಹೌದು, ಮುದಗಲ್ ಪಟ್ಟಣದಲ್ಲಿ ಬದಲಾವಣೆ ಮಾಡಲಾಗಿದೆ.

ಉ) ಮುದಗಲ್ ಪಟ್ಟಣದಲ್ಲಿ ಸ್ಥಳೀಯ ಸಂಸ್ಥೆಯ ತೀರ್ಮಾನದಂತೆ ಬೀದಿ ದೀಪಗಳ ಬದಲು ರಾಘವೇಂದ್ರ ಸ್ವಾಮಿ ದೇವಸ್ಥಾನದಿಂದ ಹುಸೇನ್‌ಭಾಷಾ ದರ್ಗಾದವರೆಗೆ ಹಾಗೂ ಡಾ: ಶಾಹೀಮ ಮನೆಯವರೆಗೆ ಮೆಟಲಿಂಗ್ ಹಾಗೂ ಡಾಂಬರೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಊ) 14 ಜನ ಸದಸ್ಯರು ಹಾಜರಾಗಿರುತ್ತಾರೆ. (ನಿರ್ಣಯದ ಪ್ರತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗುವುದು).

ಋ) ಇಂತಹ ಪ್ರಸಂಗ ಉದ್ಭವಿಸಿರುವುದಿಲ್ಲ.

664(863) : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಔರಾದ್ ಪಟ್ಟಣ ಪಂಚಾಯ್ತಿ / ಪುರಸಭೆಗೆ ಮಂಜೂರಾಗಿರುವ ಸಿಬ್ಬಂದಿ ಸಂಖ್ಯೆ ಎಷ್ಟು (ಸಿಬ್ಬಂದಿ ದರ್ಜೆವಾರು ವಿವರಗಳನ್ನು ಒದಗಿಸುವುದು);

ಆ) ಈ ಪೈಕಿ ಈಗ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ಸಂಖ್ಯೆ ಎಷ್ಟು;

ಇ) ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ದರ್ಜೆವಾರು ವಿವರಗಳನ್ನು ಒದಗಿಸುವುದು);

ಈ) ಎಷ್ಟು ಅವಧಿಯಿಂದ ಈ ಹುದ್ದೆಗಳು ಖಾಲಿ ಇದೆ;

ಉ) ವಿವಿಧ ವರ್ಗದ ಹುದ್ದೆಗಳು ಬಹಳ ಕಾಲದಿಂದ ಖಾಲಿ ಇರುವುದರಿಂದ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ ಖಾಲಿ ಇರುವ ಹುದ್ದೆಗಳನ್ನು ಆದಷ್ಟು ತೀವ್ರವಾಗಿ ಭರ್ತಿಮಾಡಲು ಸರ್ಕಾರ ಅನುಸರಿಸುವ ಕ್ರಮಗಳೇನು?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು)

ಅ)

ಕ್ರಮ ಸಂಖ್ಯೆ	ದರ್ಜೆಗಳು	ಮಂಜೂರಾದ ಹುದ್ದೆಗಳು
1.	ಮುಖ್ಯಾಧಿಕಾರಿಗಳ ದರ್ಜೆ–2	1
2.	ಕಿರಿಯ ಅಭಿಯಂತರರು	1
3.	ಮೊದಲನೆ ದರ್ಜೆ ಸಹಾಯಕ	1
4.	ಸಮುದಾಯ ವ್ಯವಹಾರ ಅಧಿಕಾರಿ	1
5.	ಪ್ರ.ದ.ಕಂದಾಯಾಧಿಕಾರಿ	1
6.	ನೀರು ಸರಬರಾಜು ಅಪರೇಟರ್	1
7.	ಕಂಪ್ಯೂಟರ್ ಅಪರೇಟರ್ / ಡಾಟಾ ಎಂಟ್ರಿಅಪರೇಟರ್	1
8.	ಕಿರಿಯ ಆರೋಗ್ಯ ನಿರೀಕ್ಷಕರು	1
9.	ಸಮುದಾಯ ಸಂಘಟಕರು	1
10.	ದ್ವಿತೀಯ ದರ್ಜೆ ಸಹಾಯಕ	3
11.	ಕರವಸೂಲಿಗಾರ	1
12.	ವಾಹನ ಚಾಲಕ	1
13.	ಸಹಾಯಕ ನೀರು ಸರಬರಾಜು ಅಪರೇಟರ್	1
14.	ಸ್ಯಾನಿಟರಿ ಸೂಪರ್‌ವೈಸರ್	1
15.	ಸೀನಿಯರ್ ವಾಲ್ವಮೆನ್	1
16.	ಪೌರಕಾರ್ಮಿಕರು	15
17.	ದಲಾಯತ್	1
18.	ಲೋಡರ್ಸ್	4
19.	ಜವಾನ/ನೀರು ಸರಬರಾಜು ವಾಲ್ವಮೆನ್	3
ಆ) 1.	ಪ್ರಭಾರಿ ಆರೋಗ್ಯ ನೀರಿಕ್ಷರಕು ಮುಖ್ಯಾಧಿಕಾರಿಗಳು	–
2.	ಕಿರಿಯ ಅರೋಗ್ಯ ನಿರೀಕ್ಷಕರು	1
3.	ದ್ವಿತೀಯ ದರ್ಜೆ ಸಹಾಯಕ	2
4.	ಪಂಪ್ ಚಾಲಕ	4
5.	ಕರವಸೂಲಿಗಾರ	2
6.	ಜವಾನ	4
7.	ಪೌರಕಾರ್ಮಿಕರು	6
ಇ) 1.	ಮುಖ್ಯಾಧಿಕಾರಿಗಳು ದರ್ಜೆ–2	1
2.	ಕಿರಿಯ ಅಭಿಯಂತರರು	1
3.	ಮೊದಲನೆ ದರ್ಜೆ ಸಹಾಯಕ	1

1	2	3
4.	ಸಮುದಾಯ ವ್ಯವಹಾರ ಅಧಿಕಾರಿ	1
5.	ಪ್ರ.ದ. ಕಂದಾಯಾಧಿಕಾರಿ	1
6.	ನೀರು ಸರಬರಾಜು ಅಪರೇಟರ್	1
7.	ಕಂಪ್ಯೂಟರ್ ಅಪರೇಟರ್/ಡಾಟಾ ಎಂಟ್ರಿ ಅಪರೇಟರ್	1
8.	ಸಮುದಾಯ ಸಂಘಟಕರು	1
9.	ದ್ವಿತೀಯ ದರ್ಜೆ ಸಹಾಯಕ	1
10.	ವಾಹನಚಾಲಕ	1
11.	ಸಹಾಯಕ ನೀರು ಸರಬರಾಜು ಅಪರೇಟರ್	1
12.	ಸ್ಯಾನಿಟರಿ ಸೂಪರ್‌ವೈಸರ್	1
13.	ಸೀನಿಯರ್ ವಾಲ್ವಮೆನ್	1
14.	ಪೌರಕಾರ್ಮಿಕರು	9
15.	ದಲಾಯತ್	1
16.	ಲೋಡರ್	4

ಈ) 1–1–86ರ ನಂತರ ಯಾವುದೇ ತರಹದ ನೇಮಕಾತಿಗೆ ನಿರ್ಭಂದವಿದ್ದ ಕಾರಣ ಸದರಿ ಹುದ್ದೆಗಳು ಖಾಲಿ ಇರುತ್ತವೆ.

ಉ) ಲಭ್ಯವಿರುವ ಸಿಬ್ಬಂದಿಯವರಿಂದ ಕರ್ತವ್ಯ ನಿರ್ವಹಿಸಲಾಗುತ್ತಿದೆ.

ಊ) ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

665(864) : ಶ್ರೀ ಗುರುಪಾದಪ್ಪ ನಾಗಪೂರಪಲ್ಲಿ (ಔರದ್) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸ್ಥಾಪಿಸಲಾಗಿರುವ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾಗಿರುವ ಸಬ್ಸಿಡಿ ಮೊತ್ತ ಎಷ್ಟು (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು);

ಆ) ಈ ಸಬ್ಸಿಡಿ ಹಣವು ಎಷ್ಟು ಅವಧಿಯಿಂದ ಬಾಕಿ ಇದೆ;

ಇ) ರಾಜ್ಯದಲ್ಲಿ ಬಹುತೇಕ ಕೈಗಾರಿಕೆಗಳು ವಿಶೇಷವಾಗಿ ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಬರುವ ಕೈಗಾರಿಕೆಗಳು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವುದರಿಂದ ಸರ್ಕಾರವು ಆದಷ್ಟು ಶೀಘ್ರವಾಗಿ ಹಲವಾರು ವರ್ಷಗಳಿಂದ ಬಾಕಿ ಇರುವ ಸಬ್ಸಿಡಿ ಹಣವನ್ನು ಬಿಡುಗಡೆ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಪ್ರಸಕ್ತ ಕೈಗಾರಿಕಾ ನೀತಿಯಡಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿಗೆ
111-92 ಸಹಾಯಧನ ನೀಡಲು ಅವಕಾಶವಿರುವುದಿಲ್ಲ. ದಿನಾಂಕ 31–3–04 ರವರೆಗೆ